Seshadripuram Educational Trust

Seshadripuram Educational Trust
SINCE 1930
INSTITUTIONS

# Vani

**The Voice of Excellence**

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 38
Edition - 2
Jan - 2026

# ವಾಣಿ

ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು-560020
www.set.edu.in | info@set.edu



ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ – 2023 3



ಯಲಹಂಕ: ಘಟಿಕೋತ್ಸವ 9



ಯಲಹಂಕ: 27ನೇ ವಾರ್ಷಿಕ ಸ್ನೇಹ ಸಮ್ಮಿಲನ 9



ಯಲಹಂಕ: ಸಮಾಗಮ ಸಮಾರಂಭ 9



SIT Mysuru: VTU Women's Handball Championship 10



Seshadripuram: Interfaith Seminar on Peace 9



Seshadripuram: OISCA Global Summit 2025 6



Seshadripuram Evening College: NSS Annual Camp 8



Law College: Orientation and Felicitation Program 9



Yelahanka: Inauguration of PG Programs 10

**For Internal Circulation only**

Book-Post

To,

If undelivered, please return it to:
Editor, 'Vani' Quarterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

**Managing Editor**
N.R. Pandith Aradhya
President

**Chief Editor**
Nadoja Dr. Wooday P Krishna
Hon. General Secretary

**Editors**
Shantamma, Sr. Journalist
Bhuvaneshwari R.S.
Dr Kavyashree H.
Pavithra Kumari B.P.

**Editorial Board**
S. Seshanarayana
W.G. Ramakrishna
B.C. Lokanath
P.C. Narayana
M.S. Nataraj
Dr K. Prahlada Rao
Dr Vinay S.
Dr Bhargavi V.R.
Dr Raji Pillai
Dr Vatsala G.
Dr Pranitha B.S.
Dr S.N. Venkatesh
Dr Chaitra Shashidhar
Dr Major Anandappa I.
Dr Jayaram
Dr N.S. Satish
Dr Jagadish G.T.
Dr Sowmya Erappa K.
Prof. Vidya Shivannavar
Prof. G.K. Manjunath
Prof. Manjunath R.V.
Dr R. Manjunath
Prof. T. Doddegowda
Prof. Archana Swami N.
Prof. Mahantesh H.B.
Prof. Sumati C.
Prof. R. Mahalakshmi
Parimala L.K.
Netramani
Shylaja V.K.
H.N. Nanda
Sowmya B.M.
Vijayakumar M.D.
J. Maitridevi

# Editorial

As 2025 draws to a close, we look back with joy and deep appreciation for the milestones that have made this year truly unforgettable for the Seshadripuram family.

While academics has long been our strongest pillar, this year's proud distinction comes from our remarkable rise in sports—highlighted by Seshadripuram Educational Trust receiving the Karnataka Kreeda Poshak Award 2023 from the Department of Youth Empowerment and Sports, Government of Karnataka. Adding to this glory, our students once again represented Karnataka at the Republic Day Parade 2025 in New Delhi, reaffirming our sustained presence and growing prominence in national-level events.

In academics, our institutions continued their tradition of excellence, with students achieving numerous ranks and distinctions across Pre-University, Undergraduate, Postgraduate, and SSLC levels. Our dedication to social responsibility shone brightly as well. The NSS Unit of Seshadripuram First Grade College, Yelahanka, received the Best NSS Unit Award, with our volunteers honoured as Best NSS Volunteers at the state level. The Indian Red Cross Society also felicitated us for consistently organising impactful blood donation camps and supporting humanitarian initiatives.

Another proud moment for the entire fraternity was when our mentor, Nadoja Dr. Wooday P. Krishna was invited to deliver the Convocation Address at the 5th Annual Convocation of Bengaluru North University, alongside receiving several prestigious honours.

We look ahead with renewed inspiration. With enduring academic strength, rising sports achievements, and meaningful contributions in community service, Seshadripuram Educational Trust continues to shape empowered and socially productive citizens.

**Editor**




For suggestions & feedback mail us at : editorialvani@gmail.com

## In the Media







"We cannot all succeed when half of us are held back." – Malala Yousafzai

# Congratulations

## ಶೇಷಾದ್ರಿಪುರಂ ಶಿಕ್ಷಣ ದತ್ತಿಗೆ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಗರಿ








ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು 'ಕ್ರೀಡಾ ಪೋಷಕ ಪ್ರಶಸ್ತಿ – 2023' ಗೆ ಭಾಜನರಾದರು. ಸರ್ಕಾರದ ವತಿಯಿಂದ ಯವನಿಕಾದಲ್ಲಿ ಡಿಸೆಂಬರ್ 1, 2025ರಂದು ನಡೆದ 2022 ಮತ್ತು 2023 ಸಾಲಿನ ಏಕಲವ್ಯ, ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಕ್ರೀಡಾ ರತ್ನ ಮತ್ತು ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಇನ್ನು ಮುಂದೆ ಆಯಾಯ ವರ್ಷವೇ ಏಕಲವ್ಯ ಪ್ರಶಸ್ತಿ ನೀಡಲಾಗುವುದು. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ತಿಳಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ನೀಡಲಾದ 'ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ'ಯು ಪ್ರಶಸ್ತಿ ಪತ್ರ, 10 ಲಕ್ಷ ರೂ.ಗಳು ಹಾಗೂ ಫಲಕಗಳನ್ನೊಳಗೊಂಡಿದೆ.

## ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಫೆಲೋಶಿಪ್ ಗೌರವ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ(ಕೆಎಸ್‌ಡಿಎ), 2025ನೇ ಸಾಲಿನ ಫೆಲೋಶಿಫ್‌ಗೆ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಭಾಜನರಾಗಿದ್ದಾರೆ. ಇವರು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಗೌರವಾರ್ಥವಾಗಿ ಈ ಫೆಲೋಶಿಫ್‌ನ್ನು ನೀಡಿ ಗೌರವಿಸಲಾಗಿದೆ. ಈ ಫೆಲೋಶಿಫ್ ಮೂಲಕ ಡಾ. ಕೃಷ್ಣ ಅವರಿಗೆ ಕರ್ನಾಟಕದ ವಿವಿಧ ಪ್ರಶಸ್ತಿಗಳು ಮತ್ತು ಅಕಾಡೆಮಿಯ 12 ವಿಭಾಗಗಳಲ್ಲಿನ ಫೆಲೋಶಿಪ್‌ಗಳಿಗೆ ಗಣ್ಯ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿಜ್ಞಾನ ಸಂವಹನಕಾರರನ್ನು ನಾಮನಿರ್ದೇಶನ ಮಾಡುವ ಹಕ್ಕು ದೊರೆತಿದೆ. ಇವರು ಕೆಎಸ್‌ಟಿಎಯ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಆಹ್ವಾನಿಸಲ್ಪಡಲಿದ್ದಾರೆ. ಕೃಷ್ಣ ಅವರ ಸಹಕಾರ ಮುಂದುವರಿದು ಅಕಾಡೆಮಿಯ ವಿಜ್ಞಾನ ಕ್ಷೇತ್ರದ ಪ್ರಯತ್ನಗಳು, ಕಾರ್ಯಕ್ರಮಗಳು ಇನ್ನಷ್ಟು ಬಲಪಡಲಿವೆ ಎಂದು ಕೆಎಸ್‌ಟಿಎ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದೆ.

## ಸಂಯಮ ಪ್ರಶಸ್ತಿಗೆ ಆಯ್ಕೆ

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ 2024–25ನೇ ಸಾಲಿನ 'ಸಂಯಮ ಪ್ರಶಸ್ತಿ' ಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳು ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು, ಸಮಾಜ ಸೇವಕರು ಆದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ತಿಳಿಸಿದೆ. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯಲ್ಲಿ 2010ರಿಂದ 'ಸಂಯಮ ಪ್ರಶಸ್ತಿ'ಯನ್ನು ಸ್ಥಾಪಿಸಲಾಗಿದ್ದು, ಮದ್ಯಪಾನ ಹಾಗೂ ಮಾದಕವಸ್ತು ಬಳಕೆಯ ವಿರುದ್ಧ ಜನಜಾಗೃತಿಯಲ್ಲಿ ತೊಡಗಿಸಿಕೊಂಡಿರುವ ಸಮಾಜ ಸುಧಾರಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಧರ್ಮಸ್ಥಳ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗಡೆ ಅವರಿಗೆ ಮೊದಲ 'ಸಂಯಮ ಪಶಸ್ತಿ' ನೀಡಿ ಗೌರವಿಸಲಾಗಿತ್ತು. 2024–25ನೇ ಸಾಲಿನ ಪ್ರಶಸ್ತಿಗೆ ಡಾ. ಕೃಷ್ಣ ಅವರು ಭಾಜನರಾಗಿದ್ದಾರೆ. ಮದ್ಯಪಾನ ಮತ್ತು ಮಾದಕ ವಸ್ತು ಬಳಕೆಯ ವಿರುದ್ಧ ತಾವು ಮಾಡಿರುವ ಹೋರಾಟ ಹಾಗೂ ಜನಜಾಗೃತಿ ಪ್ರಚಾರಗಳನ್ನು ಗುರುತಿಸಿ, ಅರ್ಹ ಸಮಾಜ ಸುಧಾರಕರನ್ನು ಆಯ್ಕೆ ಮಾಡಿ ಗೌರವಿಸಲು ನವೆಂಬರ್ 29ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಪ್ರಶಸ್ತಿ ಪ್ರದಾನ ಮಾಡಲು ಮುಖ್ಯ ಮಂತ್ರಿಗಳನ್ನು ವಿನಂತಿಸಲಾಗುವುದು ಎಂದು ಮಂಡಳಿಯ ಅಧ್ಯಕ್ಷರು ಶರಣಪ್ಪ ಸಲಾದಪುರ ತಿಳಿಸಿದ್ದಾರೆ.

## ವೂಡೇ ಪಿ. ಕೃಷ್ಣರಿಗೆ 'ಸುವರ್ಣಶ್ರೀ' ರಾಷ್ಟ್ರೀಯ ಗೌರವ



ವಿಭೂತಿಪುರ ಮಠದಿಂದ ಪ್ರತಿ ವರ್ಷ ಕೊಡಮಾಡುವ 'ಸುವರ್ಣಶ್ರೀ' ರಾಷ್ಟ್ರೀಯ ಗೌರವ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಲಭಿಸಿದೆ. ಪ್ರಶಸ್ತಿ ಪ್ರಧಾನ ಸಮಾರಂಭವು ಶ್ರೀಮಠದಲ್ಲಿ ಇತ್ತೀಚೆಗೆ ನಡೆಯಿತು. ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ "ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ಸಮಾಜದಲ್ಲಿ ಸಜ್ಜನರು, ಸೇವಾ ಪರವಾಗಿ ಜೀವನ ನಡೆಸಿದ ಉತ್ತಮ ವ್ಯಕ್ತಿಗಳನ್ನು ಸನ್ಮಾನಿಸುವುದರಿಂದ ಯುವಜನಾಂಗಕ್ಕೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಪ್ರೇರಣೆ ದೊರೆಯುತ್ತದೆ" ಎಂದು ಹೇಳಿದರು. ಕ್ಷೇತ್ರನಾಥ ವೀರಭದ್ರಸ್ವಾಮಿ ಜಾತ್ರೆ ಅಂಗವಾಗಿ ಹಮ್ಮಿಕೊಂಡಿದ್ದ ಈ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಕೃಷ್ಣರನ್ನು ಗೌರವಿಸಲಾಯಿತು.

ಮಠದ ಜಾತ್ರೆಯ ಪೂಜೆ ವೇಳೆ ದೇಶದ ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿಗಳ ಹೆಸರಿನಲ್ಲಿ ಸಂಕಲ್ಪ ಮಾಡುವ ಅಪರೂಪದ ಮಠ ವಿಭೂತಿಪುರ, ಮಠಗಳು ಧರ್ಮದೀಕ್ಷೆಯ ಜೊತೆಗೆ ವಿದ್ಯಾರ್ಥಿಗಳಿಗೆ ದೀಕ್ಷೆಯನ್ನು ನೀಡಬೇಕು. ಲೋಕದ ಹಿತ ಕಾಪಾಡುವುದು ಪ್ರತಿಯೊಬ್ಬನ ಕರ್ತವ್ಯವಾಗಬೇಕು ಎಂದು ಈ ಸಂದರ್ಭದಲ್ಲಿ ಪ್ರಶಸ್ತಿ ಪುರಸ್ಕೃತರು ನಾಡೋಜ ವೂಡೇ ಪಿ. ಕೃಷ್ಣ ಹೇಳಿದರು. ಸಮಾರಂಭದಲ್ಲಿ ಡಾ. ಮಹಾಂತಲಿಂಗ ಸ್ವಾಮೀಜಿ, ಭೈರತಿ ಬಸವರಾಜ, ಪುಟ್ಟಣ್ಣ, ನೊಣವಿನಕೆರೆ ಮಠದ ಶ್ರೀ ಡಾ. ಕರಿವೃಷಭ ದೇಶೀಕೇಂದ್ರ ಸ್ವಾಮೀಜಿ, ಚಾನುಕೋಟಿ ಮಠದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಶಿವಗಂಗೆ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡಿದರು. ಕೆರೂರು, ಎಮ್ಮಿಗನೂರು, ಗುಳೇದಗುಡ್ಡ, ಚನ್ನಗಿರಿ ಮತ್ತಿತರ ಮಠಗಳ ಶ್ರೀಗಳು ಪಾಲ್ಗೊಂಡಿದ್ದರು. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಕೆಪಿಸಿಸಿ ಕಾರ್ಯದರ್ಶಿ ಡಿ.ಕೆ ಮೋಹನ್ ಹಾಗೂ ಮತ್ತಿತರರು ಭಾಗವಹಿಸಿದ್ದರು.

'ಪ್ರಜಾಪ್ರಭುತ್ವ ಹಾಗೂ ಸ್ವರಾಜ್ಯಗಳು ಸಮಾನತೆಯ ಅಡಿಪಾಯದ ಮೇಲೆ ನಿಂತಿರಬೇಕು. ಶಾಶ್ವತವಾಗಿ ಸ್ಥಿರಗೊಂಡ ಒಂದು ಆಳುವ ವರ್ಗದ ಅಸ್ಥಿತ್ವವೂ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ.' – ಡಾ. ಬಿ.ಆರ್. ಅಂಬೇಡ್ಕರ್

# Congratulations & Achievements

## Dynamic School 2025





Yelahanka, Seshadripuram High School - has been recognised for its continuous adoption of innovative educational practices. The school was awarded “The Dynamic School 2025” by the Education News Network at the Karnataka Educators’ Summit.

## The India School Merit Awards-2025



Yelahanka, Seshadripuram High School - ranked No. 3 in Bengaluru, No. 3 in Karnataka, and No. 9 in India by the Indian School Merit Awards 2025. The awards, organised by Education Today, are a prestigious national platform recognising academic excellence, holistic development, and innovation.



**Dr S. Sharmila**, of Seshadripuram College was honoured with the Outstanding Educator Award at the South Asia Indian School Awards, 30th Edition, held in Bengaluru.



**Prof. Vidya Shivannavar.** received a special felicitation from the Indian Red Cross Society on behalf of the Seshadripuram Group of Institutions, in recognition of its significant contribution to humanitarian service in consistently organising blood donation camps and various outreach initiatives.



**Capt. Ramesh M. Acharya** Associate NCC Officer of Seshadripuram First Grade College, Yelahanka, received the “Vishwada Hemmeya Kannadiga Award – 2025” during the 70th Kannada Rajyotsava celebrations for his outstanding contribution to education and youth development through NCC. Additionally, 20 NCC cadets from the college were honoured for their exemplary volunteer service and participation in social outreach activities.



**Capt. R. Chikka Rangaswamy** of Seshadripuram Institute of Commerce and Management secured the Silver Medal at the Karnataka State Tumkur Shooting Championship and was also recognised for winning a medal at the All India GV Mavalankar Shooting Competition, for which he was felicitated on 25th Oct. at Yavanika Auditorium, Bengaluru.

## Ph.D. Awarded



### Sandhya P. Zingade

Asst. Prof. of Seshadripuram Evening College, has been awarded a Ph.D. in Commerce by the University of Mysore for her thesis titled “Role Conflict and Coping Strategies Among Women Entrepreneurs in Karnataka.”



### Vinaysagar L.S.

HOD of Management at Seshadripuram Evening College, has been awarded a Ph.D. in Commerce by the University of Mysore for his thesis titled “Issues and Challenges of Startups in Karnataka with Special Reference to Kolar and Chikkaballapur District.”



### Varshini S.K.

from the PG Department of Business Administration, has been conferred the Ph.D. in Management at the 8th Annual Convocation of Presidency University. Her research, titled “The Impact of Individual Investors' Behavior on Investment Decision Making: Evidence from the Indian Stock Marke”.



### Veena R.

from the PG Department of Computer Applications, has been conferred the Doctor of Philosophy by Sri Siddhartha Academy of Higher Education, Tumkur for her research titled “An Integrated Framework for Extractive Multi-Document Kannada Text Summarization.”



### Prathap Lingaiah

Head of the Department of Political Science, has been conferred the Ph.D. by Karnataka State Open University for his research titled “Rajiv Gandhi's Foreign Policy towards South East Asia.”



**Sharada Prasad K.B.** Netball Captain of Seshadripuram Independent P.U. College, Seshadripuram, represented Bangalore North District at the State Level Netball Competition and won the Silver Medal.



Students of Seshadripuram Independent Pre-University College, Mysuru excelled in taluk and district-level cultural and sports events. Three students were selected for the State-level Weightlifting Competition and two for the State-level Yoga Competition. In the taluk-level inter-collegiate competitions, the college secured I First Place, I Second Place, and 3 Third Places across essay writing, drawing, and debate events, bringing pride to the institution.

“Education imparted by the heart can bring revolution in society.” – Maulana Abul Kalam Azad

## Seshadripuram Composite PU College, Seshadripuram



**Deependar Singh Kunwar,** SCPUC, won the Gold Medal in the SGFI State Level Taekwondo Championship 2025 and the Silver Medal in the SGFI National Level Taekwondo Championship 2025 held in Jammu & Kashmir.



**Himagouri S. Jamadar,** SCPUC, secured the Silver Medal in the SGFI State Level Shooting Championship 2025 and earned selection to the SGFI National Level Championship to be held in Madhya Pradesh.



**Navneeth A. M., Yashas M. G., and Niranjan M.** SCPUC, secured the Silver Medal in the SGFI State Level Volleyball Championship 2025.



**Shriya N.,** SCPUC, secured the Silver Medal in the All India National Level Shooting Championship 2025 held in Tamil Nadu, showcasing commendable excellence on the national stage.



**Merina Devi,** Physical Education teacher at Seshadripuram High School, Yelahanka, participated in the State-Level Sports Meet for P.E. teachers at Mudubidare, won 1st place in Relay and 2nd place in Kabaddi.



**Akshara Anand, Hani D. R., and Royston Barnes** from Seshadripuram High School, Yelahanka, participated in the State-Level Fencing Championship and were selected for the National Level.



**Ananya M,** student of Seshadripuram High School, Yelahanka won 1st place in the District Level Karate Competition and was selected for the State Level.



**Pavani P.** (I PUC – HEBA), Seshadripuram Evening PU College, won the Gold Medal in the State Level Fencing Competition organised by the Department of Pre-University Board, Bengaluru North.



**Vaishnavi S. Jamadar,** of Seshadripuram English High School, won Gold Medal at State-Level Shooting Championship. She is selected for the National Level under the School Games Federation of India to be held in Bhopal, Madhya Pradesh.



**Bhuvan M.** of Seshadripuram Independent P U College, Seshadripuram, participated in the Bangalore North District Level Boxing Selection trials for the PU State level Competition and won the Silver medal.



**Dhruva R S** and **Dhruva Narayana S P** of Seshadripuram Independent P U College, Seshadripuram, represented Bangalore North Weight Lifting Boys Team in the State Level Weight Lifting Competition Held at Kolar on 24th and 25th November 2025. Dhruva Narayana S P won the Bronze Medal in the Competition.



Seshadripuram Law College emerged champions in the Intercollegiate Men's Table Tennis Tournament 2025–26, organized by Karnataka State Law University and hosted by Ramaiah College of Law, Bengaluru, on 23–24 September 2025.



Students of Seshadripuram Degree College, Mysuru participated in Mysore Inter-collegiate Weightlifting, Karate and Kickboxing Competition held on 3rd–4th October. In Weightlifting, the college secured 5 Gold, 3 Silver, and 2 Bronze medals, with the boys' team winning the Overall Championship. In Karate and Kickboxing, students won 1 Gold, 5 Silver, and 3 Bronze medals.



The Kho-Kho Girls' Team of Seshadripuram Independent Pre-University College, Seshadripuram, won the Silver Medal at the Taluk and District Level Kho-Kho Competition.



Rotaract Club of SICM was honoured with the Emerald Recognition for the First Quarter by Rotaract District 3191for conducting meaningful initiatives.



The Principal and NSS Unit of Seshadripuram Degree College received an Appreciation Letter from the Mysuru City Corporation on 19th November 2025 for their exemplary environmental service. The unit has adopted and maintained two parks near Lakshmikanthanagar, Mysuru.

"ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಕಲಿಸುವ ಧರ್ಮವನ್ನು ನಾನು ಇಷ್ಟಪಡುತ್ತೇನೆ". – ಡಾ. ಬಿ.ಆರ್. ಅಂಬೇಡ್ಕರ್



The Men's Volleyball Team of Seshadripuram College emerged as Winners at Antharagni 2025, the Inter-Collegiate Sports Meet organized by Surana College.



The Women's Throwball Team of Seshadripuram College emerged as Winners in the Dr. B. N. V. Subrahmanya Memorial Throwball (W) Sports Meet 2025 organized by Jyothy Institute of Commerce and Management.



The Badminton Team of Seshadripuram College secured Second Place in the Bengaluru City University Inter-Collegiate Badminton Competition, organized by St. Joseph College of Commerce.



**Aradhya Mahesh Naik** of Seshadripuram High School, Yelahanka won First Place in Yoga (Under-11) at the 12th Students Olympics National Games 2025, Rohtak.



Students of Seshadripuram Independent Pre-University College, Seshadripuram, achieved notable success at inter-collegiate events, with Saiheranmayi B. and Sinchana S securing Second Prize in the Collage Competition held at Arihant PU College, and the college team winning First Prize in the Fashion Show conducted at Aurobindo PU College.



ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಆಯೋಜಿಸಿದ್ದ ತುಮಕೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಶೇಷಾದ್ರಿಪುರಂ ಕಾಲೇಜು, ತುಮಕೂರು ಪ್ರಥಮ ಸ್ಥಾನ ಪಡೆದು ಚಾಂಪಿಯನ್ಸ್ ಪಟ್ಟವನ್ನು ಅಲಂಕರಿಸಿದ ಆಟಗಾರರಿಗೆ ಪ್ರಾಂಶುಪಾಲರಾದ ಡಾ. ಜಗದೀಶ ಜಿ.ಟಿ., ದೈಹಿಕ ಶಿಕ್ಷಣ ನಿರ್ದೇಶಕರಾದ ಮನೋಹರ ಎ.ಪಿ. ಕಾಲೇಜಿನ ಆಡಳಿತ ಮಂಡಳಿ ಮತ್ತು ಬೋಧಕ ಬೋಧಕೇತರ ಸಿಬ್ಬಂದಿಗಳು ಶುಭಕೋರಿದರು.



Seshadripuram High School, Yelahanka had 300 students from Grades 1–9 participated in the school-level Spell Bee Competition, of which 274 qualified for the next round and 23 won medals for top scores.

## OISCA Global Summit 2025




Seshadripuram, Seshadripuram College, 20–21 Nov. – organised the OISCA Global Summit 2025, a two-day international conference on "Regenerating Our Planet: Synergizing for a Sustainable Tomorrow," in association with OISCA international – South India and Bengaluru Chapters and supported by Vishwa Yuvak Kendra (VYK), New Delhi, the summit brought together over 250 delegates from Japan, Srilanka, Mexico, Nepal, and across India.The summit was inaugurated by Shri H. K. Patil, Hon'ble Minister for Law, Parliamentary Affairs and Legislation, Government of Karnataka, who emphasised sustainability as a shared societal responsibility and called upon youth to contribute innovative solutions for environmental challenges.

The Chief Guest, Shri L. Radhakrishnan, IAS, spoke on circular economy practices, carbon neutrality, and regenerative agriculture. Presiding over the programme, Nadoja Dr. Wooday P. Krishna highlighted Mahatma Gandhi's philosophy of "Simple Living, High Thinking" in the context of sustainable development. The conference witnessed expert sessions by eminent administrators, environmentalists, and academicians, and included paper presentations by school and college students, faculty, industry professionals, and policymakers, reinforcing the summit's inclusive and collaborative approach towards building a sustainable future.

"The children of today will make the India of tomorrow." – Jawaharlal Nehru

# ಶೇಷಾದ್ರಿಪುರಂ ಕಾಲೇಜುಗಳಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ನ. 8 – ಕಾಲೇಜಿನಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಕನಕದಾಸ ಜಯಂತಿ ಮತ್ತು ಪೋಷಕರು ಹಾಗೂ ಉಪನ್ಯಾಸಕರ ಸಭೆಯೂ ನೆರವೇರಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಪ್ರೊಫೆಸರ್ ಆರ್.ವಿ. ಮಂಜುನಾಥ್ ಕನ್ನಡ ಭಾಷೆಯ ಪ್ರಾಚೀನತೆ ವಿವರಿಸುತ್ತಾ ಪ್ರತಿಯೊಬ್ಬರೂ ಕನ್ನಡ ಭಾಷೆಯನ್ನು ಬಳಸಿ ಬೆಳೆಸಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಲ್ಲಾ ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಪಾಲ್ಗೊಂಡಿದ್ದರು.



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ನ. 4 – ಕಾಲೇಜಿನಲ್ಲಿ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಆಯೋಜಿಸಲಾಗಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕನ್ನಡ ಭಾಷೆಯ ಮಹತ್ವ ಹಾಗೂ ಹೊರನಾಡ ಕನ್ನಡಿಗರಿಗೆ ಕನ್ನಡ ಕಲಿಸುವ ಹೊಣೆಗಾರಿಕೆಯನ್ನು ಕುರಿತು ಮಾತನಾಡಿದರು. ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವಿದ್ಯಾ ಶಿವಣ್ಣವರ್ ಹಾಜರಿದ್ದರು. ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಾರವಿಡೀ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗಾಗಿ ವಿವಿಧ ಕನ್ನಡ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.



**ಯಲಹಂಕ**, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, ನ. 7 – ರಾಜ್ಯೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವೆ ಹಾಗೂ ಸಾಹಿತಿ ಬಿ.ಟಿ. ಲಲಿತಾ ನಾಯಕ್ ಆಗಮಿಸಿದ್ದು ಕನ್ನಡ ಭಾಷೆಯ ಮೌಲ್ಯ ಹಾಗೂ ಮಹತ್ವವನ್ನು ವಿವರಿಸುತ್ತಾ ಪ್ರತಿಯೊಬ್ಬರೂ ಹೃದಯದಿಂದ ಕನ್ನಡಿಗರಾಗಿರಬೇಕು, ಸ್ವಾರ್ಥ ಭಾವನೆಯನ್ನು ಬಿಟ್ಟು ಶುದ್ಧ ಹೃದಯಿಯಾಗಿ ಸಮಾಜಮುಖಿಗಳಾಗಿರಬೇಕೆಂದು ತಿಳಿಸಿದರು. ಶಿಕ್ಷಣ ದತ್ತಿಯ ಪ್ರಧಾನ ಗೌರವ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಹಾಗೂ ಧರ್ಮದರ್ಶಿಗಳಾದ ಶಶಾಂಕ್ ಮತ್ತು ಪ್ರಾಂಶುಪಾಲರು ಪ್ರೊ. ಟಿ. ದೊಡ್ಡೇಗೌಡ ಉಪಸ್ಥಿತರಿದ್ದರು.



**ಮೈಸೂರು**, ಶೇಷಾದ್ರಿಪುರಂ ಪದವಿ ಕಾಲೇಜು, ನ. 27 – 70ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭ ಹಾಗೂ ಮೈಸೂರು ಜಿಲ್ಲಾ ಅಂತರ ಪ್ರೌಢಶಾಲೆಗಳ ಭಾಷಣ ಹಾಗೂ ರಸಪ್ರಶ್ನೆ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಸಮಾರಂಭದಲ್ಲಿ ವಿಶ್ವನಾಥ ಶೇಷಾಚಲ, ಸ್ಥಾಪಕ ಅಧ್ಯಕ್ಷರು, ಎಸ್.ವಿ.ಜಿ. ಸಮೂಹ ಸಂಸ್ಥೆಗಳು, ಮೈಸೂರು, ಎ. ಪಾರ್ಥೇಗೌಡರು, ನಿವೃತ ಮುಖ್ಯ ಶಿಕ್ಷಕರು, ಲೋಕೇಶ್ ಎಂ.ಆರ್. ಕನ್ನಡ ಉಪನ್ಯಾಸಕರು, ತಂಕಮ್ಮ ಎಂ. ತೆರೆಸ, ಪ್ರಾಂಶುಪಾಲರು, ಆಶಾ ವಿ. ಮುಖ್ಯೋಪಾಧ್ಯಾಯಿನಿ ಇವರನ್ನು ಗೌರವಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ ಹಿರಿಯಕವಿ, ಲೇಖಕರು, ಸಾಹಿತ್ಯ ಚಿಂತಕರಾದ ಮೂಡ್ನಾಕೂಡು ಚಿನ್ನಸ್ವಾಮಿಯವರು "ನಮ್ಮ ನಾಡುನುಡಿಯ ಹಿರಿಮೆಯನ್ನು ತಿಳಿಸುವುದರ ಜೊತೆಗೆ ಆಯಾಯ ಪ್ರಾಂತೀಯ ಭಾಷೆಯಲ್ಲಿ ಮಕ್ಕಳಿಗೆ ಮೂಲಶಿಕ್ಷಣವನ್ನು ನೀಡಬೇಕಾಗಿದೆ ಆಗಮಾತ್ರ ಕನ್ನಡಭಾಷೆ ಉಳಿಯಲು ಸಾಧ್ಯವಾಗುತ್ತದೆ" ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡಿ ಮಾತೃಭಾಷೆಗೆ ಆದ್ಯತೆ ನೀಡಿ ಪ್ರಾದೇಶಿಕ ಭಾಷೆಗೆ ಮನ್ನಣೆ ನೀಡಿ ಕನ್ನಡದಲ್ಲೇ ಮಾತನಾಡಿ, ಆಗ ಕನ್ನಡ ಉಳಿಯುತ್ತದೆ ಎಂದರು. ಪ್ರಾಂಶುಪಾಲರು ಡಾ. ಸೌಮ್ಯ ಈರಪ್ಪ ಕೆ., ಪ್ರೊ. ಅರ್ಚನಸ್ವಾಮಿ ಎನ್. ಮತ್ತು ಉಪನ್ಯಾಸಕರು, ಉಪನ್ಯಾಸಕೇತರರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರತಿಭಾನ್ವಿತರನ್ನು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.



**ಮೈಸೂರು,** ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ನ. 19 – ಬಸವ ಅಧ್ಯಯನ ಕೇಂದ್ರ ಮತ್ತು ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದೊಂದಿಗೆ 70ನೇ ಕನ್ನಡ ರಾಜ್ಯೋತ್ಸವ ಮತ್ತು 132ನೇ ದಿಗ್ವಿಜಯ ದಿವಸ್ ಅನ್ನು ಕಾಲೇಜಿನಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಂತರ ಶಾಲಾ ರಸಪ್ರಶ್ನೆ ಮತ್ತು ಭಾಷಣ ಸ್ಪರ್ಧೆಗಳನ್ನು ನಡೆಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಸ್ವಾಮಿ ವಿವೇಕಾನಂದ ಯುವ ಚಳವಳಿಯ ಮಾಜಿ ನಿರ್ದೇಶಕರಾದ ಸುಂದರಂ, ಸ್ವಾಮಿ ವಿವೇಕಾನಂದ, ಬಸವಣ್ಣ ಮತ್ತು ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಸ್ಪರ್ಧೆಗಳಿಗೆ ಚಾಲನೆ ನೀಡಿದರು. ಪ್ರೊ. ಅರ್ಚನಸ್ವಾಮಿ ಎನ್. ಅಧ್ಯಕ್ಷತೆ ವಹಿಸಿದ್ದರು.



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು – 70ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತು. ಮುಖ್ಯ ಅತಿಥಿಗಳಾಗಿ ಜಗದೀಶ್ ಜಾಲ, ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ವಿಶೇಷ ಆಹ್ವಾನಿತರಾಗಿ ಎಂ.ಡಿ. ವಿಜಯಕುಮಾರ್, ಎಸ್. ಶಿವಶಂಕರ್, ಜಿ. ಪರಮಶಿವಯ್ಯ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಪ್ರಾಂಶುಪಾಲರು ಪ್ರೊ. ಆರ್. ಮಹಾಲಕ್ಷ್ಮಿ ಉಪಸ್ಥಿತರಿದ್ದರು.

**"ನೀವು ಹುಲಿ ಸಿಂಹಗಳಾಗಿ ಬದುಕಿರಿ, ಯಾಕೆಂದರೆ ಬಲಿಕೊಡುವುದು ಕುರಿಕೋಳಿಗಳನ್ನೇ ಹೊರತು ಹುಲಿಸಿಂಹಗಳನ್ನಲ್ಲ" – ಡಾ. ಬಿ.ಆರ್. ಅಂಬೇಡ್ಕರ್**



**ತುಮಕೂರು,** ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, ನ. 14 – 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಸಹ ಪ್ರಾಧ್ಯಾಪಕರಾದ ಪ್ರೊ. ಎಸ್. ಶಶಿಕುಮಾರ್‌ರವರು ಆಗಮಿಸಿ, "ನಮ್ಮ ನಾಡಿನ ಇತಿಹಾಸ ಹಾಗೂ ಕನ್ನಡ ಭಾಷಾ ಪರಂಪರೆಯ ಹಿರಿಮೆಯನ್ನು ತಿಳಿಸಿ, ಕನ್ನಡ ಭಾಷೆ ನಮ್ಮ ನೆರಳಿನಂತೆ ನಾವು ಎಲ್ಲಿಗೆ ಹೋದರು ಕನ್ನಡವನ್ನು ಮರೆಯಬಾರದು" ಎಂದರು. ಪ್ರಾಂಶುಪಾಲರಾದ ಪ್ರೊ. ಮಹಾಂತೇಶ ಹೆಚ್.ಬಿ. ಅಧ್ಯಕ್ಷತೆ ವಹಿಸಿದ್ದರು.



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆ, ನ. 7 – 70ನೇ ಕನ್ನಡ ರಾಜ್ಯೋತ್ಸವವನ್ನು ಶಾಲೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳಾದ ಕೆ. ಕೃಷ್ಣಸ್ವಾಮಿ, ಮುಖ್ಯ ಅತಿಥಿಗಳಾಗಿ ಡಾ. ಯು.ಎಂ. ರವಿ, ಉಪನ್ಯಾಸಕರು ಮತ್ತು ಬುಡಕಟ್ಟು ಸಂಶೋಧಕರು, ಹಾಗೂ ಮುಖ್ಯೋಪಾಧ್ಯಾಯಿನಿ ನೇತ್ರಾಮಣಿ ಭಾಗವಹಿಸಿದ್ದರು.



**ತುಮಕೂರು,** ಶೇಷಾದ್ರಿಪುರಂ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಸಾಂಸ್ಕೃತಿಕ – ಕ್ರೀಡೆ, ಎನ್.ಎಸ್.ಎಸ್, ಎನ್.ಸಿ.ಸಿ. ಕಾರ್ಯಕ್ರಮಗಳ ಉದ್ಘಾಟನೆಯನ್ನು ಆಯೋಜಿಸಲಾಗಿತ್ತು. ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೆ.ಎಸ್. ಸಿದ್ಧಲಿಂಗಪ್ಪ ಆಗಮಿಸಿ ಮಾತನಾಡಿ, "ಕನ್ನಡ ಶಕ್ತಿವಂತ ಭಾಷೆ, ಕನ್ನಡದಲ್ಲಿ ಕಲಿತು ಸರ್ ಎಂ. ವಿಶ್ವೇಶ್ವರಯ್ಯ, ರಾಜಾರಾಮಣ್ಣ ವಿಶ್ವಮಾನ್ಯತೆಯನ್ನು ಪಡೆದರು. ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಕನ್ನಡದಲ್ಲಿ ವ್ಯವಹರಿಸಿ. ಕನ್ನಡವು ಬಳಕೆಯಿಂದಲೇ ಉಳಿಯುವುದು" ಎಂದರು. ಪ್ರಾಂಶುಪಾಲರು ಡಾ. ಜಗದೀಶ್ ಜಿ.ಟಿ. ಹಾಜರಿದ್ದರು.



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು, ನ. 1 – ಕಾಲೇಜಿನ ಸಭಾಂಗಣದಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಕಾಲೇಜಿನ ಪ್ರಾಂಶುಪಾಲರು ಪ್ರೊ. ವಿದ್ಯಾ ಶಿವಣ್ಣನವರ್ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಪ್ರೊ. ಜಿ.ಕೆ. ಮಂಜುನಾಥ್, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಾಗಿದ್ದರು.



**ಯಲಹಂಕ,** ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ನ. 7 – 70ನೇ ಕನ್ನಡ ರಾಜ್ಯೋತ್ಸವವನ್ನು ಕಾಲೇಜಿನಲ್ಲಿ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರು ಮಾತನಾಡುತ್ತಾ, "ಕನ್ನಡ ಭಾಷೆ ಶಿಕ್ಷಣ ಇಲಾಖೆಯಿಂದಲೇ ಹೆಚ್ಚು ಕಡೆಗಣಿಸಲ್ಪಟ್ಟಿದ್ದು, ಪದವಿ ಕಾಲೇಜಿನಲ್ಲಿ ಕನ್ನಡ ಭಾಷೆಯನ್ನು ನಾಲ್ಕು ಸೆಮಿಸ್ಟರ್‌ಗಳಿಗೆ ಸೀಮಿತಗೊಳಿಸಲಾಗಿದೆ. ದ್ವಿಭಾಷಾ ಸೂತ್ರವೇ ನಮಗೆ ಸಾಕು, ಆದರೆ ಕೇಂದ್ರ ಸರ್ಕಾರ ತ್ರಿಭಾಷಾ ಸೂತ್ರದ ಮೂಲಕ ಹಿಂದಿಯನ್ನು ಹೇರುತ್ತಿದ್ದು, ಪದವಿ ತರಗತಿಗಳ ಹೆಚ್ಚಿನ ವಿದ್ಯಾರ್ಥಿಗಳು ಭಾಷಾ ಪತ್ರದ ಆಯ್ಕೆಯ ವಿಷಯ ಬಂದಾಗ ಕನ್ನಡಕ್ಕೆ ಬದಲಾಗಿ ಹಿಂದಿ ಮತ್ತು ಸಂಸ್ಕೃತ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಕನ್ನಡ ಭಾಷೆ ಕಡೆಗಣಿಸಲ್ಪಡುತ್ತಿದೆ, ಎಲ್ಲಿಯವರೆಗೆ ರಾಜ್ಯದ ಶೈಕ್ಷಣಿಕ ಪಠ್ಯಕ್ರಮದಲ್ಲಿ ಕನ್ನಡ ಕಡ್ಡಾಯ ಆಗುವುದಿಲ್ಲವೋ ಅಲ್ಲಿಯವರೆಗೆ ಕನ್ನಡದ ಏಳಿಗೆ, ಬೆಳವಣಿಗೆ ಕಷ್ಟ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಖಾಸಗಿ ಶಾಲೆ ಮತ್ತು ಸರ್ಕಾರಿ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಬೇಕು" ಎಂದು ಕಳವಳ ವ್ಯಕ್ತಪಡಿಸಿದರು. ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಮಾತನಾಡಿ – ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ ಆರಂಭದಿಂದಲೂ ಕನ್ನಡ ಭಾಷೆ, ಸಂಸ್ಕೃತಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಸಂಜೆ ಕಾಲೇಜು, ನ. 27 – ಗೋಧೂಳಿ ಕನ್ನಡ ಸಂಘ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು, ಸಂಕಲ್ಪ ಹಾಗೂ ಸಮರ್ಪಣ ಸಂಘಗಳ ಸಹಯೋಗದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಿಗಾಗಿ ಕನ್ನಡ ನಾಡಿನ ವೈಶಿಷ್ಟ್ಯಗಳ ಕುರಿತ ಸ್ಪರ್ಧೆಗಳು ನಡೆದವು. ಕೆ.ಸಿ. ನೀಲಕಂಠ, ಉಪಾಧ್ಯಕ್ಷರು, ಕರ್ನಾಟಕ ಕ್ಯಾನ್ಸರ್ ಸೊಸೈಟಿ, ಮುಖ್ಯ ಅತಿಥಿಯಾಗಿ ಭಾಗವಹಿಸಿದರು ಹಾಗೂ ಪ್ರಾಂಶುಪಾಲರು ಡಾ. ಎನ್.ಎಸ್. ಸತೀಶ್ ಅಧ್ಯಕ್ಷತೆ ವಹಿಸಿದ್ದರು.



**ಕೆಂಗೇರಿ,** ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ನ. 1 – 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡನುಡಿ ಹಬ್ಬವನ್ನು ಆಚರಿಸಲಾಯಿತು. ಪ್ರಾಂಶುಪಾಲರು ಡಾ. ಆರ್. ಮಂಜುನಾಥ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಭಾಷೆಯ ಬಳಕೆಯಲ್ಲಿ ವಿದ್ಯಾರ್ಥಿಗಳ ಹೊಣೆಗಾರಿಕೆಯನ್ನು ನೆನಪಿಸಿದರು.

## Seven-Days NSS Annual Camp






Seshadripuram, Seshadripuram Evening College – The NSS Unit conducted its seven-day Annual Special Camp at Bhaktrahalli and Mugabala, inaugurated by Dr. C. Somashekar and Nadoja Dr. Wooday P. Krishna, with Dr. N.S. Satish, Principal, and other dignitaries. The week-long camp had activities included drills, Shramadhan at government schools, temples and educational institutions, sessions on startups, social media ethics, the Nirbhaya Act, and cultural programmes, along with expert sessions by Yogesh V. (Start-ups), Jagadish Jala (Street Plays and Social Awareness), and Girish H. N. (social media and Morality), in addition to environmental initiatives, plantation drives, cultural programmes, the Camp Lighting Ceremony (Shibhira Jyoti), and concluded with a valedictory programme.

"The Constitution is a vehicle of life." – B. R. Ambedkar

# Events

## ಘಟಿಕೋತ್ಸವ



**ಯಲಹಂಕ,** ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು, ನ. 29 – ಶೇಷಾದ್ರಿಪುರಂ ಶಿಕ್ಷಣ ದತ್ತಿ ವತಿಯಿಂದ ಬೆಂಗಳೂರು, ಮೈಸೂರು, ತುಮಕೂರು, ಮಂಡ್ಯ ಶಿಕ್ಷಣ ಸಂಸ್ಥೆಗಳ ಪದವೀಧರರಿಗೆ ಯಲಹಂಕದ ಶೇಷಾದ್ರಿಪುರಂ ಕಾಲೇಜಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭ ನಡೆಯಿತು. ಸಮಾರಂಭದಲ್ಲಿ ಪಿಎಚ್.ಡಿ. ಪದವೀಧರರು, ರ್‍ಯಾಂಕ್ ವಿಜೇತರು, ಟಾಪರ್ಸ್‌ಗಳನ್ನು ಸನ್ಮಾನಿಸಲಾಯಿತು. ಪದವೀಧರ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನಾಡೋಜ ಡಾ. ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದು, ಪದವೀಧರರಿಗೆ ಪ್ರಮಾಣ ವಚನ ಬೋಧಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಮೀನಾಕುಮಾರಿ ದೇಶಪಾಂಡೆ ಮಹಿಷಿ, ಗೌರವ ನಿರ್ದೇಶಕರು, ಗಾಂಧೀ ಸೆಂಟರ್ ಆಫ್ ಸೈನ್ಸ್ ಆ್ಯಂಡ್ ಹ್ಯೂಮನ್ ವ್ಯಾಲ್ಯೂಸ್, ಭಾರತೀಯ ವಿದ್ಯಾ ಭವನ, ಬೆಂಗಳೂರು, ಭಾಗವಹಿಸಿ ಮಾತನಾಡಿದರು. ಧರ್ಮದರ್ಶಿಗಳು ಎಂ.ಎಸ್. ನಟರಾಜ್, ಪ್ರೊ. ಕೆ.ಪಿ. ನರಸಿಂಹಮೂರ್ತಿ, ಪಿ.ಸಿ. ನಾರಾಯಣ, ಕೆ. ಕೃಷ್ಣಸ್ವಾಮಿ, ಬಿ.ಎ. ಅನಂತರಾಮ್, ಡಬ್ಲ್ಯೂ.ಡಿ. ವಿಜಯಕುಮಾರ್, ಡಬ್ಲ್ಯೂ.ಡಿ. ಅಶೋಕ್, ನಿರ್ದೇಶಕರುಗಳಾದ ಡಾ. ಭಾರ್ಗವಿ ವಿ.ಆರ್., ಡಾ. ವಿನಯ್ ಎಸ್., ಡಾ. ರಾಜಿಪಿಳ್ಳೈ ಮತ್ತು ಪ್ರಾಂಶುಪಾಲರುಗಳಾದ ಮೇಜರ್ ಡಾ. ಆನಂದಪ್ಪ ಐ., ಡಾ. ಎಸ್.ಎನ್. ವೆಂಕಟೇಶ್, ಡಾ. ಎನ್.ಎಸ್. ಸತೀಶ್, ಡಾ. ಜಯರಾಮ, ಡಾ. ಪ್ರಣೀತಾ, ಪ್ರೊ. ವಿದ್ಯಾ ಶಿವಣ್ಣವರ್, ಪ್ರೊ. ಸುಮತಿ ಸಿ., ಡಾ. ಸೌಮ್ಯ ಈರಪ್ಪ ಕೆ., ಡಾ. ಜಗದೀಶ ಜಿ.ಟಿ. ಹಾಜರಿದ್ದರು.

## ಸ್ನೇಹ–ಸಮ್ಮಿಲನ



**ಯಲಹಂಕ,** ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು, ನ. 20 – ಶೇಷಾದ್ರಿಪುರಂ ಸಮೂಹ ಸಂಸ್ಥೆಗಳ ಆಶ್ರಯದಲ್ಲಿ ನಡೆದ 27ನೇ ವಾರ್ಷಿಕ ಸ್ನೇಹ–ಸಮ್ಮಿಲನ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ, ನಾಡೋಜ ಡಾ. ಹಂ.ಪ. ನಾಗರಾಜಯ್ಯ ಮಾತನಾಡಿ "ಸ್ನೇಹ ಇರುವ ಕಡೆ ಸಂತೋಷ, ನೆಮ್ಮದಿ ಇರುತ್ತದೆ. ಸ್ನೇಹಕ್ಕೆ ಮನುಷ್ಯನ ಬದುಕಿನಲ್ಲಿ ಅತ್ಯಂತ ಮಹತ್ವಪೂರ್ಣವಾದ ಸ್ಥಾನವಿದೆ" ಎಂದು ಅಭಿಪ್ರಾಯಪಟ್ಟರು. ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ದತ್ತಿ ಉಪಾಧ್ಯಕ್ಷರು ಟಿ.ಎಸ್. ಹೆಂಜಾರಪ್ಪ, ಗೌರವ ಕೋಶಾಧ್ಯಕ್ಷರು ಪಾರ್ಥಸಾರಥಿ ಹಾಗೂ ಧರ್ಮದರ್ಶಿಗಳು, ಉಪನ್ಯಾಸಕರು, ಸಿಬ್ಬಂದಿ ಭಾಗವಹಿಸಿದ್ದರು.

## ಸಮಾಗಮ ಸಮಾರಂಭ



**ಯಲಹಂಕ,** ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು, ನ. 11 – ಶೇಷಾದ್ರಿಪುರಂ ಶಿಕ್ಷಣ ದತ್ತಿ ವತಿಯಿಂದ ಕಾಲೇಜಿನಲ್ಲಿ ಪ್ರಾಂಶುಪಾಲರು, ಸಿಬ್ಬಂದಿ ಹಾಗೂ 2025ರ ದ್ವಿತೀಯ ಪಿಯುಸಿ ರಾಜ್ಯಮಟ್ಟದ ಪ್ರತಿಭಾನ್ವಿತರಿಗೆ ಗೆಟ್‌ಟುಗೆದರ್ ಕಾರ್ಯಕ್ರಮ ನಡೆಯಿತು. ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಶೇಷಾದ್ರಿಪುರಂ ಕಾಂಪೋಸಿಟ್ ಪಿಯು ಕಾಲೇಜು, ಕೆಂಗೇರಿಯ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಯಲಹಂಕದ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ತುಮಕೂರಿನ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ರಾಜ್ಯಮಟ್ಟದ ಪ್ರತಿಭಾನ್ವಿತರನ್ನು ಸಮಾರಂಭದಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ವೇದಿಕೆಯಲ್ಲಿ ಶ್ರೀ ಅರವಿಂದ ಜತ್ತಿ, ಬಸವ ಸಮಿತಿ ಅಧ್ಯಕ್ಷರು, ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಧರ್ಮದರ್ಶಿಗಳು ಎನ್.ಪಿ. ಕಾರ್ತಿಕ್, ಡಬ್ಲ್ಯೂ.ಡಿ. ಅಶೋಕ್, ಎ. ಅನಂತರಾಮು, ಕೆ. ಕೃಷ್ಣಸ್ವಾಮಿ, ಸಿ. ಪ್ರಶಾಂತ್‌ಕುಮಾರ್ ಹಾಗೂ ದತ್ತಿಯ ಉಪಾಧ್ಯಕ್ಷರು ಅನಿಲ್‌ಕುಮಾರ್ ಅವರು ಭಾಗವಹಿಸಿದ್ದರು.

## Interfaith Seminar on Peace



**Seshadripuram**, Seshadripuram College, 13 Dec. - The PG Department of Commerce in collaboration with URI, Cooperation Circles of Karnataka and South India, Karnataka Gandhi Smarak Nidhi and SET, organized a Seminar and Panel Discussion to mark the 25th Anniversary of URI and 125th Anniversary of the International Association for Religious Freedom. The program, centred on the theme "Interfaith Solidarity for a Peaceful and Inclusive Future", was presided over by Nadoja Dr. Wooday P. Krishna, Honorary General Secretary. Rev. Swami Nityasthananda Ji Maharaj, President, Ramakrishna Mutt delivered inaugural address. Eminent speakers from URI and IARF shared perspectives on dialogue, mutual respect, and cooperation among faiths.

## Orientation Programme and Felicitation Ceremony



**Seshadripuram**, Seshadripuram Law College, 27 Sept. – An Orientation Programme and Felicitation Ceremony was organized for the first-year students of the 3-year LL.B and 5-year BA LL.B courses, and to honour Dr. (Prof.) Ravivarma Kumar, who has completed 50 years of service to the legal fraternity. The event, held at the Seshadripuram Educational Trust Conference Hall, featured Dr. Ravivarma Kumar as the Chief Guest. He shared five guiding principles (Panchasheela) essential for every law student. Prof. Lawrence Surendra, Guest of Honour, emphasized the importance of cultivating both knowledge and a reflective mind. Nadoja Dr. Wooday P. Krishna, Honorary General Secretary, Seshadripuram Educational Trust, encouraged students to participate actively and utilize the institution's academic resources to the fullest. The programme set an inspiring tone for new learners beginning their legal journey.

"ನಾವು ಮೊದಲನೆಯದಾಗಿ ಮತ್ತು ಕೊನೆಯದಾಗಿ ಭಾರತೀಯರೇ ಆಗಿದ್ದೇವೆ". – ಡಾ. ಬಿ.ಆರ್. ಅಂಬೇಡ್ಕರ್

## VTU State Level Women's Handball Championship



Mysuru, Seshadripuram Institute of Technology, 18 Nov. – hosted the VTU State Level Women's Handball Championship. The event was inaugurated by Navaneetha Pattemane Udaya Kumar, International Basketball Player. Sudina H C, VTU Sports Regional Director, Mysuru, attended as Special Invitee. Nadoja Dr. Wooday P. Krishna graced the occasion.

## Inauguration of Dr. ValuAltor



Seshadripuram, Seshadripuram Independent Pre-University College, 19 Nov. – Dr. ValuAltor, the world's first AI-based evaluation platform for 2nd PU Science students developed by IPOMO, was inaugurated. The program was formally launched by Nadoja Dr. Wooday P. Krishna, Honorary General Secretary, Seshadripuram Educational Trust. A live demonstration was given to students, highlighting the platform's features and capabilities.

## Women Safety and Laws



Seshadripuram, Seshadripuram Degree College, 5 Nov. – ANKURA - Forum for Women Empowerment, in association with IQAC and the Women & Child Welfare Department of Karnataka, organized an awareness session on "Women Safety and Laws Related to Women". The session was conducted by Amitha Athresh, HR Centre Administrator, and Pallavi Deshpande, Legal Advisor, from the One Stop Centre.

## Book Exhibition



Kengeri, Seshadripuram Academy of Business Studies, 16 Oct. – Under the IQAC initiative, a Book Exhibition was organized in collaboration with Karnataka Gandhi Smaraka Nidhi, Ramakrishna Math Basavanagudi, and Basava Samithi.

## A Faculty Development Program



Yelahanka, Seshadripuram PU College, 6 Oct. – A FDP was conducted with Sudarshan Sharma and B. S. Ramakrishna Mudre of Swami Vivekananda Youth Movement as resource persons. Presided over by Prof. T. Doddegowda, Principal.

## Inauguration of PG Programs (MBA, MCom & MCA) – 2025–26



Yelahanka, Seshadripuram First Grade College, 16 Dec. – The PG Department of Management, Commerce and Computer Applications inaugurated the MBA (25th Batch), M.Com (11th Batch), and MCA (2nd Batch) programmes for the academic year 2025–26. The programme was inaugurated by Prof. Dr. Ramesh B., Vice-Chancellor, Dr. Manmohan Singh Bengaluru City University, and presided over by Nadoja Dr. Wooday P. Krishna, Honorary General Secretary, Seshadripuram Educational Trust.

## Student Conference



Seshadripuram, Seshadripuram Institute of Commerce and Management, 30 Oct. – A Student Conference on Gender Equality and Gender Socialization was organised by the Student Council, PoSH Cell, and IQAC, with Dr. Du. Saraswathi as Chief Guest and Smt. Prathibha Rai as Keynote Speaker, highlighting gender sensitivity and inclusive practices. Presided over by Nadoja Dr. Wooday P. Krishna, the conference saw 70 student research paper presentations across three tracks, reflecting strong social awareness and critical engagement.

## Faculty Development Programme



Seshadripuram, Seshadripuram Evening College, 19 Sept. – The FDP Cell, in association with Aapta Salaha Kendra, organized an FDP titled "Blending Professional and Personal Life in Metropolis." Resource persons C.P. Usha Rani and Dr. Mythili K. conducted interactive sessions. Dr. N.S. Satish, Principal, graced the event.

## YUVA CONNECT – Viksit Bharat @2047



Yelahanka, Seshadripuram First Grade College, 27 Sept. – NSS organised Yuva Connect – Viksit Bharat @2047 in association with the Ministry of Youth Affairs and Sports and the Regional Directorate of NSS. The programme was inaugurated by Giridhar Upadhyaya, Regional Director, NSS, and was addressed by Nagalakshmi, Chief Guest, and Sharan Setty, Resource Person. Dr. S. N. Venkatesh, Principal, presided over the programme.

"Education is the most powerful weapon you can use to change the world." – Nelson Mandela

## Children's Day Celebration



Seshadripuram, Kumara Park, Seshadripuram English High School, 14 Nov. – Children's Day was celebrated at the school premises, with students participating enthusiastically in various cultural activities.

## Waste to Worth Exhibition



Seshadripuram, Seshadripuram Law College, 30 Oct. – The Environmental Club organised an exhibition titled "A Drive on Waste to Worth", promoting reuse and recycling through creative student-made products. An innovative exchange system replaced money with plastic, collecting 140 kg of plastic, which was handed over to Eco Solution Pvt. Ltd. for recycling and later donation to NGOs.

## A Job Fair



Mysore, Seshadripuram Degree College, 12 Nov. – An Inclusive Job Fair for the Underserved was organised on campus by the Placement Cell Lakshya in collaboration with IQAC, the Institution's Innovation Council, and Samarthanam Trust. Subhash Chandra, Centre Head, Samarthanam Trust, addressed the gathering, highlighting employment as a form of service. The job fair witnessed 318 registrations and participation from 22 companies, marking it a successful step towards inclusive employment.

## TECHIGNITE 2025



Seshadripuram, Seshadripuram Degree College, 3-13 Oct. – The Department of Computer Science, in association with the Pragnya Science Forum, organised TECHIGNITE 2025, a series of inter-class competitions to enhance students' technical, creative, and collaborative skills. The event conducted team challenges, quizzes, gaming contests, coding-based tasks, and an AI prompt-engineering competition. With enthusiastic participation across events, TECHIGNITE 2025 successfully fostered innovation, teamwork, and digital proficiency among students.

## Talk on Shock Waves and Hypersonic Technology



Mysuru, Seshadripuram Institute of Technology, 22 Nov. – A distinguished Talk was conducted by Prof. Gopalan Jagadeesh, Senior Prof, IISc Bengaluru. He addressed on the link between Basic Science, Engineering, and Technology, highlighting his work in Shock Waves and Hypersonic Technology and their applications. He also reflected on Vedantic ideologies and their relevance to scientific thinking and human values. The event was graced by Nadoja Dr. Wooday P. Krishna, Honorary General Secretary and Dr. Prahlad Rao, Principal.

## Annual Athletic Meets




Seshadripuram, Seshadripuram Composite Pre-University College, 27 Nov. – The 30th Annual Athletic Meet was inaugurated by Nataraj M.S., Honorary Assistant Secretary, SET. Shrudiya Ramangowda, National Athlete and Director of Physical Education, Nitte Deemed University, attended as Chief Guest. Sudhir V. Bhainaik, National Athlete and Director of Physical Education, Seshadripuram First Grade College, Yelahanka, was the Guest of Honour.




Seshadripuram, Seshadripuram Independent Pre University College, 21 Nov. – had conducted the Annual Athletic Meet 2025 at Malleshwaram Ground. C. Prashanth Kumar, Trustee, Seshadripuram Educational Trust was the chief guest.

## World Mental Health Day



Yelahanka, Seshadripuram Public School, 10 Oct. – World Mental Health Day was observed with activities like the Happiness Tree and Kindness Chain, promoting positivity and emotional well-being among students. The program concluded with a message on empathy, self-care, and mental health awareness.

"ದುರ್ಬಲರಿಗೆ ಎಂದಿಗೂ ಇತರರನ್ನು ಕ್ಷಮಿಸಲು ಸಾಧ್ಯವಾಗುವುದಿಲ್ಲ. ಕ್ಷಮೆಯು ಬಲಶಾಲಿಗಳ ಲಕ್ಷಣವಾಗಿದೆ." – ಮಹಾತ್ಮ ಗಾಂಧೀಜಿ

## ರಾಜ್ಯಮಟ್ಟದ ಗಾಂಧೀ ತತ್ವ – ಯುವ ನಾಯಕತ್ವ ಶಿಬಿರ



**ಯಲಹಂಕ,** ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಅ. 25 ರಿಂದ 31 – ಮಹಾತ್ಮ ಗಾಂಧಿಯವರ 150ನೇ ಜಯಂತಿ ಹಾಗೂ ಕೇಂದ್ರ ಗಾಂಧಿ ಸ್ಮಾರಕ ನಿಧಿಯ 75ನೇ ವಾರ್ಷಿಕೋತ್ಸವದ ಅಂಗವಾಗಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ, ಎನ್.ಎಸ್.ಎಸ್. ರಾಜ್ಯ ಕೋಶ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಹಾಗೂ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಗಾಂಧಿ ಅಧ್ಯಯನ ಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ದೊಡ್ಡಬಳ್ಳಾಪುರದಲ್ಲಿ 'ಗಾಂಧೀಜಿಯ ಮೌಲ್ಯಗಳು' ಎಂಬ ರಾಜ್ಯಮಟ್ಟದ ಏಳು ದಿನಗಳ ಯುವ ನಾಯಕತ್ವ ಶಿಬಿರವನ್ನು ದತ್ತಿಯ ಗೌರವ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಉದ್ಘಾಟಿಸಿದರು.

## ಕಾಮರ್ಸ್ ಫೆಸ್ಟ್ 2025 – ವಾಣಿಜ್ಯಜ್ಞಾನ ಪ್ರದರ್ಶನ



**ತುಮಕೂರು,** ಶೇಷಾದ್ರಿಪುರಂ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ. ಮತ್ತು ಬಿ.ಬಿ.ಎ. ವಿದ್ಯಾರ್ಥಿಗಳಿಗಾಗಿ 'ಕಾಮರ್ಸ್ ಫೆಸ್ಟ್ 2025' ಎಂಬ ಕಾರ್ಯಕ್ರಮವನ್ನು ಎಂ.ಕಾಂ. ವಿದ್ಯಾರ್ಥಿಗಳು ಆಯೋಜಿಸಿದ್ದರು.

## ಅಖಿಲ ಭಾರತ ಮುಕ್ತ FIDE ರೇಟೆಡ್ ಚೆಸ್ ಪಂದ್ಯಾವಳಿ



**ಕೆಂಗೇರಿ,** ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಡಿ. 14 – ಕಾಲೇಜು ಆವರಣದಲ್ಲಿ ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಅಖಿಲ ಭಾರತ ಮುಕ್ತ FIDE ರೇಟೆಡ್ ರ್‍ಯಾಪಿಡ್ ಚೆಸ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. 15 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರಿಗಾಗಿ ಮುಕ್ತಾವಕಾಶವನ್ನು ಕಲ್ಪಿಸಲಾಗಿತ್ತು. ದೇಶದ ನಾನಾ ಭಾಗಗಳಿಂದ ಸುಮಾರು 400 ಸ್ಪರ್ಧಾರ್ಥಿಗಳು ಭಾಗವಹಿಸಿದ್ದರು. ಅಂತರರಾಷ್ಟ್ರೀಯ ಚೆಸ್ ಆರ್ಬಿಟರ್ ಸಲೀಂ ಬೇಗ್ ಅವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು.

## 11ನೇ ವಾರ್ಷಿಕ ಕ್ರೀಡಾಕೂಟ



**ಮೈಸೂರು,** ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಡಿ. 02 – ಕ್ರೀಡಾಕೂಟವನ್ನು ಏಕಲವ್ಯ ಪ್ರಶಸ್ತಿ ಪುರಸ್ಕೃತ ರೀನಾ ಜಾರ್ಜ್ ಕ್ರೀಡಾಜ್ಯೋತಿಯನ್ನು ಬೆಳಗಿಸಿ ಉದ್ಘಾಟಿಸಿದರು.

## 53ನೇ ಅಂತರ ಪ್ರೌಢಶಾಲಾ ಕನ್ನಡ ಚರ್ಚಾಸ್ಪರ್ಧೆ



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಪ್ರೌಢಶಾಲೆ, ನ. 26 – ಶೇಷಾದ್ರಿಪುರಂ ದತ್ತಿಯ ಮಾಜಿ ಕೋಶಾಧ್ಯಕ್ಷರಾದ ದಿ॥ ಜಿ.ಕೆ. ಚಿಕ್ಕನರಸಿಂಹಯ್ಯನವರ ಸ್ಮರಣಾರ್ಥವಾಗಿ ನಡೆದ ಕನ್ನಡ ಚರ್ಚಾಸ್ಪರ್ಧೆ ಕಾರ್ಯಕ್ರಮದಲ್ಲಿ ದತ್ತಿಯ ಸಹಾಯಕ ಕಾರ್ಯದರ್ಶಿ ಎಂ.ಎಸ್. ನಟರಾಜ್ ಅಧ್ಯಕ್ಷತೆ ವಹಿಸಿದ್ದರು. ಧರ್ಮದರ್ಶಿಗಳಾದ ಡಬ್ಲ್ಯೂ.ಡಿ. ಅಶೋಕ್ ಉಪಸ್ಥಿತರಿದ್ದರು. ಶಾಲೆಯ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ಬಹುಮಾನವನ್ನು ಪಡೆದು ಜೊತೆಗೆ ಸ್ಪರ್ಧೆಯಲ್ಲಿ ಗೆದ್ದು ಪರ್ಯಾಯ ಪಾರಿತೋಷಕವನ್ನೂ ಶಾಲೆಗೆ ತಂದುಕೊಟ್ಟು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮುಖ್ಯೋಪಾಧ್ಯಾಯರು ಎಂ.ಡಿ. ವಿಜಯಕುಮಾರ್ ಭಾಗವಹಿಸಿದ್ದರು.

## ಸಂವಿಧಾನದ ಅರಿವು



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ನ. 31 – ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ಆಚರಿಸಲಾದ 'ಸಂವಿಧಾನದ ಅರಿವು' ಎಂಬ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶೇಷಾದ್ರಿಪುರಂ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಎಸ್. ಪ್ರಣೀತ ಆಗಮಿಸಿ ಮಾತನಾಡಿದರು. ಆಡಳಿತ ಸಲಹಾ ಸಮಿತಿಯ ಅಧ್ಯಕ್ಷರಾದ ಎನ್.ಪಿ. ಕಾರ್ತಿಕ್ ಉಪಸ್ಥಿತರಿದ್ದರು.

## 'ವಚನ – ನಿರ್ವಚನ' ಸ್ಪರ್ಧೆ



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ನ. 27– ಬಸವ ಅಧ್ಯಯನ ಕೇಂದ್ರದಿಂದ ಆಯೋಜಿಸಲಾದ 'ವಚನ – ನಿರ್ವಚನ' ಸ್ಪರ್ಧೆಗೆ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ. ಮಹೇಶ್ವರಿ ಬಿ.ಜಿ. ತೀರ್ಪುಗಾರರಾಗಿ ಆಗಮಿಸಿದ್ದರು.

## "ಇನ್ನೊವಾ" ವಿದ್ಯಾರ್ಥಿಗಳಿಂದ ವಸ್ತು ಪ್ರದರ್ಶನ



**ತುಮಕೂರು,** ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, ನ. 6 – 'ಇನ್ನೊವಾ' ಎಂಬ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಹೆಬ್ಬೂರಿನ ಎಸ್.ಹೆಚ್.ವಿ. ಶಾಲೆಯ ಅಧ್ಯಕ್ಷರಾದ ವಾಸು ಕೆ.ಎಂ., ಮತ್ತು ಚೇಳೂರಿನ ಜ್ಞಾನಜ್ಯೋತಿ ವಿದ್ಯಾಲಯದ ಪ್ರಾಂಶುಪಾಲರಾದ ಸಿ.ವಿ.ಎನ್. ಮೂರ್ತಿ ಆಗಮಿಸಿದ್ದರು.

## "ಕ್ಯಾಂಪಸ್ ಟು ಕಾರ್ಪೊರೇಟ್"



**ತುಮಕೂರು,** ಶೇಷಾದ್ರಿಪುರಂ ಕಾಲೇಜು, 'ಕ್ಯಾಂಪಸ್ ಟು ಕಾರ್ಪೊರೇಟ್' ಎಂಬ ವಿದ್ಯಾರ್ಥಿ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಕಾಲೇಜಿನ ಹಳೆ ವಿದ್ಯಾರ್ಥಿಯಾದ, ಒರಾಕಲ್ ಕಂಪನಿಯ ಗೌತಮ್ ಎನ್., ಅವರು ಭಾಗವಹಿಸಿದ್ದರು.

## ವಚನ ಸಾಹಿತ್ಯವನ್ನು ಆಧರಿಸಿದ ಸ್ಪರ್ಧೆಗಳು



**ಕೆಂಗೇರಿ,** ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ನ. 29 – ಕಾಲೇಜಿನ ಬಸವ ಅಧ್ಯಯನ ಕೇಂದ್ರವು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪದವಿಪೂರ್ವ ಕಾಲೇಜುಗಳಿಗೆ ಅಂತರಕಾಲೇಜು ಮಟ್ಟದ ಸ್ಪರ್ಧೆಗಳನ್ನು ಏರ್ಪಡಿಸಿತ್ತು.

## ಸಂವಿಧಾನ ದಿನಾಚರಣೆ



**ತುಮಕೂರು,** ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, ನ. 26 – ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ಸಂವಿಧಾನ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಂವಿಧಾನ ಕುರಿತಾದ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

"Human rights begin in small places, close to home." – Eleanor Roosevelt